**ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ. 1481/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಚೆನ್ನಕೃಷ್ಣಪ್ಪ | ಸಿಡಬ್ಲೂಃ**2** |
| ತಂದೆ/ಗಂಡನ ಹೆಸರು | ಃ | ಪಾಪಣ್ಣ | ಪಿಡಬ್ಲೂಃ**2** |
| ವಯಸ್ಸು | ಃ | 49 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ವ್ಯವಸಾಯ | 08.07.2025 |
| ವಾಸ ಸ್ಥಳ | ಃ | ಚಾಕಪ್ಪನಹಳ್ಳಿ | |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ಈಗ ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಅಣ್ಣ. ಚಾಸಾ **1** ನನ್ನ ಹೆಂಡತಿ. ಚಾಸಾ **3** ನನ್ನ ಬಾಮೈದ. ಚಾಸಾ **4** ಮತ್ತು **5** ನಮ್ಮ ಗ್ರಾಮಸ್ಥರು. ದಿನಾಂಕ **11.08.2021** ರಂದು ಸಂಜೆ **6.30** ಗಂಟೆ ಸಮಯದಲ್ಲಿ ನನ್ನ ಜಮೀನಿನ ಉತ್ತರಕ್ಕೆ ಆರೋಪಿ ಜಮೀನು ಇರುತ್ತದೆ. ಆರೋಪಿ ಜಮೀನಿನಿಂದ ನಮ್ಮ ಜಮೀನಿನ ಒಳಗೆ ಮಳೆ ನೀರು ಬರುತ್ತಿದ್ದರಿಂದ ನಾನು ಗಿಣಿಮೆ ಹಾಕಿರುತ್ತೇನೆ. ಮಳೆ ಬಂದಾಗ ಆ ಗಿಣಿಮೆ ಕೊಚ್ಚುಕೊಂಡು ಹೋಗಿರುತ್ತದೆ. ಚಾಸಾ **1** ರವರು ಗಿಣಿಮೆಯನ್ನು ಸರಿಪಡಿಸುತ್ತಿದ್ದಾಗ ಆರೋಪಿಯು ಅಲ್ಲಿಗೆ ಬಂದು ಈ ಗಿಣಿಮೆಯ ವಿಷಯಕ್ಕೆ ಬರಬೇಡ ಬಂದರೆ ನಿನ್ನನ್ನು ಪ್ರಾಣ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದರು ಮತ್ತು ಅವ್ಯಾಚ್ಯ ಶಬ್ಧಗಳಿಂದ ಬೈದು, ಕೈಗಳಿಂದ ಹೊಡೆದು ಕೆಳಕ್ಕೆ ಬೀಳಿಸಿ, ಚನಿಕೆಯಿಂದ ಚಾಸಾ **1** ರವರ ತಲೆಯ ಬಲಭಾಗಕ್ಕೆ ಹೊಡೆದಿರುತ್ತಾರೆ. ಆಗ ಗಲಾಟೆ ಶಬ್ಧ ಕೇಳಿ ನಾನು ಮತ್ತು ಚಾಸಾ **3** ರವರು ಸ್ಥಳಕ್ಕೆ ಹೋಗಿ ಬಿಡಿಸಲು ಹೋದಾಗ ಅದೇ ಚನಿಕೆಯ ದೊಣ್ಣೆಯಿಂದ ನನ್ನ ಎಡಗಾಲಿನ ಹಿಮ್ಮಡಿಗೆ ಹೊಡೆದಿರುತ್ತಾರೆ.

ಈ ಜಮೀನಿನ ತಂಟೆಗೆ ಬಂದರೆ ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಚಾಸಾ **1** ರವರು ಪ್ರಜ್ಞೆ ತಪ್ಪಿ ಬಿದ್ದಿದ್ದರಿಂದ ಚಾಸಾ **3** ರವರು ಸಹಾಯದಿಂದ ಆಂಬ್ಯೂಲೆನ್ಸ್ ನಲ್ಲಿ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದೇವು. ದಿನಾಂಕ **12.08.2021** ರಂದು ಮಧ್ಯಾಹ್ನ **3** ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ **1** ಮತ್ತು **3** ರವರು ಪೋಲೀಸ್ ಠಾಣೆಗೆ ಹಾಜರಾಗಿ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿ ನನ್ನನ್ನು ಹೊಡೆದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಆರೋಪಿ ನನಗೆ ಹೊಡೆದ ದೊಣ್ಣೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.**1** ಎಂದು ಗುರುತಿಸಲಾಗಿದೆ. ಮು.ಮಾ.**1** ಚನಿಕೆಯ ದೊಣ್ಣೆಯಾಗಿರುತ್ತದೆ.

**(ಮಾನ್ಯ ಸ.ಸಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲವೆಂದು ಪರಿಗಣಿಸಿದ್ದು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>**

ನಾನು ಜಮೀನಿನಲ್ಲಿ ಈರುಳ್ಳಿ ಬೆಳೆಯನ್ನು ಬೆಳೆದಿರುತ್ತೇನೆ ಎಂದರೆ ಸರಿ. ನಮ್ಮ ಜಮೀನಿನ ದಕ್ಷಿಣಕ್ಕೆ ಆರೋಪಿಯ ಜಮೀನು ಬರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಈರುಳ್ಳಿ ಬೆಳೆ ನಾಶ ಆಗಲಿ ಎಂದು ಆರೋಪಿಯು ಗಿಣೆಮೆಯನ್ನು ಕಿತ್ತುಹಾಕಿರುತ್ತಾರೆ ಎಂದರೆ ಸರಿ. ಮಳೆ ಬಂದಾಗ ನೀರು ನಮ್ಮ ಜಮೀನಿಗೆ ಬಂದು ಈರುಳ್ಳಿ ಬೆಳೆ ನಾಶ ಆಗಿತ್ತು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಟಿ ವಿ ಸಿ ವಕೀಲರಿಂದಃ</u>**

ದೂರಿನಲ್ಲಿ ಹೇಳಿರುವ ಜಮೀನು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ನನ್ನ ತಂದೆಗೆ **5** ಜನ ಮಕ್ಕಳು. ಆರೋಪಿ ನನ್ನ **3** ನೇ ಸಹೋದರ. ನಮ್ಮ ಜಮೀನು ವಿಭಾಗ ಮಾಡಿಕೊಂಡಿರುತ್ತೇವೆ. ವಿಭಾಗ ಪ್ರಕಾರ ನನ್ನ ಹೆಸರಿಗೆ ಆಗಿರುತ್ತದೆ. ವಿಭಾಗ ಪತ್ರವನ್ನು ಪೋಲೀಸರಿಗೆ ಕೊಟ್ಟಿರುವುದಿಲ್ಲ. ಆರೋಪಿ ಜಮೀನು ಎತ್ತರದಲ್ಲಿದೆ, ನನ್ನ ಜಮೀನು ತಗ್ಗಿನಲ್ಲಿದೆ. ಘಟನೆ ನಡೆದಾಗ ಆರೋಪಿ ಜಮೀನಿನಲ್ಲಿ ಟಮೋಟೋ ಬೆಳೆ ಇತ್ತು ಎಂದರೆ ಕೋಸು ಬೆಳೆ ಇತ್ತು. ಆರೋಪಿಯ ಜಮೀನಿನಲ್ಲಿ ನಾವು ಗುಂಡಿ ಮಾಡಿದ್ದೇವು ಎಂದರೆ ಸರಿಯಲ್ಲ. ಆ ಕುರಿತು ಆರೋಪಿ ಮಗ ನಮ್ಮ ವಿರುದ್ಧ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ಆಗ ನಾವು ರಾಜಿ ಪಂಚಾಯತಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ಆರೋಪಿ ಜಮೀನಿನ ಪಕ್ಕದಲ್ಲಿ ನಾನು ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**2.** ಚಾಸಾ **1** ರವರಿಗೆ ಚನಿಕೆಯಿಂದ ಹೊಡೆದಾಗ ರಕ್ತ ಬಂದಿರರುತ್ತದೆ. ರಕ್ತ ನೆಲಕ್ಕೆ ಮತ್ತು ಚಾಸಾ **1** ರವರ ಬಟ್ಟೆಗೆ ಚೆಲ್ಲಿತ್ತು. ಚಾಸಾ **1** ರವರ ಬಟ್ಟೆಗೆ ರಕ್ತ ಆಗಿತ್ತು ಎಂದು ಪೋಲೀಸು ಮತ್ತು ವೈದ್ಯರ ಹತ್ತಿರ ಹೇಳಿರುತ್ತೇನೆ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಲ್ಲೆಯಿಂದಾಗ ಗಾಯಗಳಿಗೆ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ವೈದ್ಯರು ಮೊಣಕಾಲಿಗೆ ಚಿಕಿತ್ಸೆ ನೀಡಿರುವುದಿಲ್ಲ, ಎಡಗಾಲಿನ ಹಿಮ್ಮಡಿ ಚಿಕಿತ್ಸೆಯನ್ನು ನೀಡಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಚಾಸಾ **1** ರವರು ಪ್ರಜ್ಞೆ ತಪ್ಪಿ ಬಿದ್ದದ್ದರು. ಚಾಸಾ **1** ರವರಿಗೆ ಆಂಬ್ಯೂಲೆನ್ಸ್ ನಲ್ಲಿ ಪ್ರಜ್ಞೆ ಬಂದಿರುತ್ತದೆ. ಘಟನಾ ಸ್ಥಳದಲ್ಲಿ ನಮ್ಮ ಊರಿನ ಜನ ಇದ್ದರು, ಆದರೇ ಎಷ್ಟು ಜನ ಇದ್ದರು ಎಂದು ಹೇಳಲಾಗುವುದಿಲ್ಲ. ನನ್ನ ಜಮೀನಿನಲ್ಲಿ ಈರುಳ್ಳಿ ಬೆಳೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನು ವಿಭಾಗ ಆಗದೇ ಇತ್ಯರ್ಥ ಇದ್ದು ಆ ಕಾರಣದಿಂದ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**3.** ಹಲ್ಲೆಯಾದಾಗ ದೊಣ್ಣೆ ಇತ್ತು ಅದರಲ್ಲಿ ಚನಕೆ ಇರಲಿಲ್ಲ. ನನಗೆ ರಕ್ತಗಾಯ ಆಗಿರಲಿಲ್ಲ. ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ದಿನಾಂಕ **12.08.2021** ಮಧ್ಯಾಹ್ನ **1** ಗಂಟೆ **discharge** ಆಗಿರುತ್ತೇನೆ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ಬಂದು ನನ್ನ ಮತ್ತು ಚಾಸಾ **1** ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆಸ್ಪತ್ರೆಯಿಂದ **discharge** ಆದ ನಂತರ ಸಮಯ **3** ಗಂಟೆಗೆ ಪೋಲೀಸರು ಬರಲು ಹೇಳಿದ್ದರಿಂದ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಯಲ್ಲಿ

ಹೇಳಿಕೆಯನ್ನು ನೀಡಿರುತ್ತೇನೆ. ಠಾಣೆಯಲ್ಲಿ ಚಾಸಾ 1 ರವರು ದೂರನ್ನು ದಾಖಲು ಮಾಡಿರುವುದಿಲ್ಲ. ಚಾಸಾ 1 ಮತ್ತು ನಾನು ಠಾಣೆಗೆ ಹೋದಾಗ ಯಾವುದೇ ದೂರನ್ನು ತಯಾರು ಮಾಡಿಕೊಂಡು ಹೋಗಿರುವುದಿಲ್ಲ. ನಾನು ಆರೋಪಿಸುತ್ತಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನನಗಾಗಲಿ ಅಥವಾ ಚಾಸಾ 1 ರವರಿಗೆ ಆಗಲಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 1 ಮತ್ತು 3 ರವರು ಆರೋಪಿ ಜಮೀನಿಗೆ ಹೋಗಿ ಹಿರಿಯರ ಮಾತು ಕೇಳಿ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅವ್ಯಾಚ್ಯ ಶಬ್ಧಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ತರಹದ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ಹಳ್ಳಿ ಕಡೆ ಸಿಗುತ್ತವೆ ಎಂದರೆ ಸರಿ. ಪೋಲೀಸರು ರಕ್ತಸಿಕ್ತದ ಬಟ್ಟೆಗಳನ್ನು ತೆಗೆದುಕೊಂಡಿರುವುದಿಲ್ಲ. ಜಮೀನಿನ ವಿವಾದವನ್ನು ಕಾರಣವಾಗಿ ಇಟ್ಟುಕೊಂಡು ಚಾಸಾ 1 ರವರಿಂದ ಸುಳ್ಳು ದೂರನ್ನು ನೀಡಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಚಾಸಾ 4 ರವರು ಇರಲಿಲ್ಲ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಶಿಡ್ಲಘಟ್ಟ.